# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.254/2023

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಪ್ರಭು | ಚಾಸಾಃ **3** ಪ್ರಾಸಾಃ **3** |
| **ತಂದೆಯ ಹೆಸರು** | : | ತೀರ್ಥಪ್ಪ | |
| **ವಯಸ್ಸು** | : | 32 ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಹೊಳೆಮಾದಾಪುರ | |

ದಿನಾಂಕಃ **21-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಆರೋಪಿ ಗೊತ್ತು. ಚಾಸಾ-1 ಮತ್ತು ಮೃತ ಚಂದ್ರಪ್ಪ ಗೊತ್ತು. ಚಾಸಾ-2 ನನ್ನ ತಂದೆ. ಮೃತ ಚಂದ್ರಪ್ಪ ರಸ್ತೆಯ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 3 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

**ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-**

ದಿಃ 06-07-2022 ರಂದು ಸಂಜೆ 04-30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಒಂದು ಮೋಟಾರ್ ಸೈಕಲ್ ನಲ್ಲಿ ನಮ್ಮ ಊರಿನಿಂದ ಹಾಲಿವಾಣ ಗ್ರಾಮಕ್ಕೆ ಹೊರಟಿದ್ದು ಇನ್ನೊಂದು ಮೋಟಾರ್ ಸೈಕಲ್ ನಂ.ಕೆಎ-17/ಇಎಂ-0801 ಮೋಟಾರ್ ಸೈಕಲ್ ನಲ್ಲಿ ಆರೋಪಿಯ ಹಿಂಬದಿಯಲ್ಲಿ ಚಂದ್ರಪ್ಪರವರನ್ನು ಕೂರಿಸಿಕೊಂಡು ಬರುತ್ತಿದ್ದು ಮತ್ತು ಸದರಿ ಮೋಟಾರ್ ಸೈಕಲ್ ಅನ್ನು ಆರೋಪಿಯು ಅತೀ ಜೋರಾಗಿ ಚಾಲನೆ ಮಾಡಿಕೊಂಡು ಬಂದು ನಮ್ಮ ಬೈಕನ್ನು ಸೈಡ್ ಹೊಡೆದು ಮುಂದೆ ಹೋಗಿದ್ದು ನಾವು ಸಹ ಅವರ ಹಿಂದೆ ಹೋಗಿದ್ದು, ನರಸಗೊಂಡನಹಳ್ಳಿ ಗ್ರಾಮದ ಹಿತ್ತಲ ಮನೆ ಮಂಜಪ್ಪರವರ ಅಡಿಕೆ ತೋಟದ ಪೂರ್ವಕ್ಕೆ ಹಾದುಹೋಗಿರುವ ಹೊನ್ನಾಳಿ ಹರಿಹರ ರಾಜ್ಯ ಹೆದ್ದಾರಿ ಸಂಖ್ಯೆ 25 ರ ಟಾರ್ ರಸ್ತೆಯಲ್ಲಿ ಸಂಜೆ 05-00 ಗಂಟೆ ಸಮಯದಲ್ಲಿ ಆರೋಪಿಯು ಮೋಟಾರ್ ಸೈಕಲ್ ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯಲ್ಲಿ ಆಕಳು ಅಡ್ಡ ಬಂದಿದ್ದರಿಂದ ಆರೋಪಿಯು ಆಕಳನ್ನು ತಪ್ಪಿಸಲು ಹೋಗಿ ಬ್ರೇಕ್ ಹಾಕಿದ್ದು ಹಿಂಬದಿಯಲ್ಲಿ ಕುಳಿತ್ತಿದ್ದ ಚಂದ್ರಪ್ಪನು ರಸ್ತೆಗೆ ಹಾರಿ ಬಿದ್ದಿದ್ದು ನಾನು ಮತ್ತು ಚಾಸಾ-2 ರವರು ನಮ್ಮ ಬೈಕನ್ನು ನಿಲ್ಲಿಸಿ ನಂತರ ಚಂದ್ರಪ್ಪರವರನ್ನು ಉಪಚರಿಸಲಾಗಿ ರಸ್ತೆಯಲ್ಲಿದ್ದ ಕಲ್ಲಿಗೆ ಚಂದ್ರಪ್ಪನ ತಲೆಯ ಹಿಂಭಾಗ ಬಲವಾಗಿ ಹೊಡೆದಿದ್ದು ಮತ್ತು ರಕ್ತಗಾಯವಾಗಿದ್ದು ನಂತರ ಚಂದ್ರಪ್ಪರವರನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ವೈದ್ಯರ ಸೂಚನೆ ಮೇರೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ವೈದ್ಯರು ಬ್ರೇನ್ ಡೆಡ್ ಆಗಿದೆ ವಾಪಾಸ್ಸು ತೆಗೆದುಕೊಂಡು ಹೋಗಿ ಎಂದು ತಿಳಿಸಿದ್ದರಿಂದ ಚಂದ್ರಪ್ಪರವರನ್ನು ವಾಪಾಸ್ಸು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದಾಗ ದಿಃ 07-07-2022 ರಂದು ಬೆಳಗ್ಗೆ 09-00 ಗಂಟೆ ಸಮಯದಲ್ಲಿ ಮಾರ್ಗ ಮಧ್ಯದಲ್ಲೇ ಚಂದ್ರಪ್ಪನು ರಸ್ತೆಯ ಅಪಘಾತದಲ್ಲಿ ತಲೆಗೆ ಆದ ಬಲವಾದ ಒಳಪೆಟ್ಟಿನಿಂದ ಮೃತ ಪಟ್ಟಿರುತ್ತಾರೆ ಎಂದು ಪೊಲೀಸರಿಗೆ ನಿಪಿ-27 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆ ಇಲ್ಲ .**

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**